ಎಲ್.ಎ.ಸಿ.ನಂ.1225/2022
ಪಿ.ಡಬ್ಲ್ಯೂ: 01

**<u>ಮಧ್ಯಂತರ ಅರ್ಜಿ ನಂ.3 ರಿಂದ 5 ರ ಮೇಲೆ ಆದ ಆದೇಶದ ಮೇರೆಗೆ</u>**
**<u>ಸಾಕ್ಷಿಯನ್ನು ಇಂದು ದಿ.10.03.2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**
**<u>ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ. M.A.H ವಕೀಲರಿಂದ</u>**

ನಾನು ಈ ಕೆಳಗಿನಂತೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

| ಅ. ನಂ | ದಾಖಲೆಗಳ ವಿವರ | ನಿಶಾನೆ |
|---|---|---|
| 1 | ತಿದ್ದುಪಡಿ ರೆಫರೆನ್ಸ ಅರ್ಜಿ | 1 ಎ |
| 2 | ದಿ.02.11.2015 ರ ಹಲಗಣಿ ಗ್ರಾಮದ ಖರೀದಿ ಪತ್ರದ ದೃಢೀಕೃತ ನಕಲು | 11 |
| 3 | ದಿ.28.01.2016 ರ ಹಲಗಣಿ ಗ್ರಾಮದ ಖರೀದಿ ಪತ್ರದ ದೃಢೀಕೃತ ನಕಲು | 12 |

ಆದ್ದರಿಂದ, ಎಲ್ಲ ದಾಖಲೆಗಳನ್ನು ಪರಿಶೀಲಿಸಿ ನನ್ನ ಅರ್ಜಿಯನ್ನು ಪುರಸ್ಕರಿಸಲು ಪ್ರಾರ್ಥಿಸುತ್ತೇನೆ.

**<u>ಪಾಟೀ ಸವಾಲುಃ ಎದುರುದಾರ ಪರವಾಗಿಃ</u>**

17) ನಾನು ಹಾಜರುಪಡಿಸಿದ ನಿ.ಪಿ.11 ಮತ್ತು 12 ಖರೀದಿ ಪತ್ರಗಳ ಜಮೀನುಗಳು ನನ್ನ ಜಮೀನಿನ ಸ್ವರೂಪದ ಜಮೀನುಗಳು ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ಸದರಿ ಖರೀದಿ ಪತ್ರಗಳು ಈ ಪ್ರಕರಣಕ್ಕೆ ಅನ್ವಯವಾಗುವುದಿಲ್ಲ ಎಂದು ಸೂಚಿಸುವುದು ಸುಳ್ಳು. ನಿ.ಪಿ.11 ಮತ್ತು 12 ಹಲಗಣಿ ಗ್ರಾಮದ ಖರೀದಿ ಪತ್ರಗಳು ಇದ್ದು, ಸದರಿ ಖರೀದಿ ಪತ್ರಗಳು ಯಾರಿಗೆ ಸಂಬಂಧಪಟ್ಟಿದ್ದು, ಯಾವ ಉದ್ದೇಶಕ್ಕೆ ಖರೀದಿ ಆಗಿರುತ್ತದೆ, ಎಷ್ಟು ಬೆಲೆಗೆ ಖರೀದಿಸಿರುತ್ತಾರೆ ಮತ್ತು ಸರ್ವೆ ನಂಬರ ಹೇಳಲು ಬರುವುದಿಲ್ಲ.

18) ನಮ್ಮ ಜಮೀನಿಗೂ ಮತ್ತು ನಿ.ಪಿ.11 ಮತ್ತು 12 ರಲ್ಲಿ ನಮೂದಿಸಲಾದ ಜಮೀನಿಗೂ ಸುಮಾರು 10-15 ಕಿಮೀ ಅಂತರ ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು 4 ಕಿಮೀ ದೂರದಲ್ಲಿದೆ ಎಂದು ನುಡಿದಿರುತ್ತಾರೆ. ನಿ.ಪಿ.11 ಮತ್ತು 12 ರಲ್ಲಿ ನಮೂದಿಸಲಾದ ಜಮೀನುಗಳನ್ನು ಗುಂಟಾ ಆಧಾರದ ಮೇಲೆ ಖರೀದಿಸಿರುತ್ತಾರೆ ಎನ್ನುವುದು ನಿಜ. ಸಾಮಾನ್ಯವಾಗಿ ಗುಂಟಾ ಜಮೀನುಗಳನ್ನು ಕೃಷಿಯೇತರ ಚಟುವಟಿಕೆಗಾಗಿ ಖರೀದಿಸಿರುತ್ತಾರೆ ಎನ್ನುವುದು ನಿಜ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)
ಓ.ಹೇ.ಕೇ. ಸರಿ ಅದೆ.

3 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ವಿಜಯಪುರ.